**ಸಾಕ್ಷಿಯನ್ನು ದಿಃ 18.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ  ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 12 ಎಂದು,

ಒಟ್ಟು 5 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 13 ಎಂದು,

ಹೊರರೋಗಿ  ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.14 ಎಂದು,

ಒಂದು ಸಿ.ಟಿ. ಸ್ಕ್ಯಾನ್ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ  ವಕೀಲರಿಂದ**

ಅರ್ಜಿದಾರರು ದಿಃ 13.04.2022 ರಂದು ಬಂದಿರುತ್ತಾರೆ. ಸಮಯ ಕೇಸ್ ಶೀಟ್ ನಲ್ಲಿ ನಮೂದಾಗಿರುವುದಿಲ್ಲ. ಗಾಯಾಳು ಸ್ಥಿತಿ ಗಂಭೀರವಾಗಿದ್ದ ಕಾರಣ ಆತನನ್ನು ಐ.ಸಿ.ಯು ಗೆ ತಕ್ಷಣ ಶಿಫ್ಟ್ ಮಾಡಲಾಗಿತ್ತು ಎಂದರೆ ಸರಿ. ಗಾಯಾಳು ಐ.ಸಿ.ಯು ನಲ್ಲಿ ದಿಃ 16.04.2022 ರವರೆಗೆ ಇದ್ದರು. ಗಾಯಾಳುವಿನ ಸ್ಥಿತಿ ಗಂಬೀರ ಆಗಿದ್ದ ಕಾರಣ ಮಧಾಹ್ನ 12.39 ಕ್ಕೆ Riles tube ಅನ್ನು ಹಾಕಿದ್ದೇವೆ ಎಂದರೆ ಸರಿ.  Riles tube ನೇರವಾಗಿ ಹೊಟ್ಟೆಗೆ ಹೋಗುತ್ತದೆ ಎಂದರೆ ಸರಿ. ನೇರವಾಗಿ ಔಷಧಿಯನ್ನು ಹೊಟ್ಟೆಗೆ ಹಾಕಲು ಅಥವಾ ಹೊಟ್ಟೆಯಲ್ಲಿರುವ ಅನಗತ್ಯ ಅಂಶವನ್ನು ತೆಗೆಯಲು ಹಾಕುತ್ತೇವೆ ಎಂದರೆ ಸರಿ. ರೋಗಿಯು ಪ್ರಜ್ಞೆ ತಪ್ಪಿದ್ದಾಗ ಮೇಲ್ಕಂಡ ಟ್ಯೂಬ್ ಅನ್ನು ಹಾಕಲಾಗುತ್ತದೆ ಎಂದರೆ ಸರಿ. ರೋಗಿಯನ್ನು ಬಿಡುಗಡೆಗೊಳಿಸುವ ಮುನ್ನ ಟ್ಯೂಬ್ ಅನ್ನು ತೆಗೆದು ಕಳುಹಿಸಿರುತ್ತೇವೆ.

2. ರೋಗಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ಇತ್ತೀಚಿಗೆ ಪರೀಕ್ಷಿಸಿದಾಗ ಎಕ್ಸರೇ ತೆಗೆದಿರುತ್ತೇನೆ. ಅದರ ವರದಿ ಪ್ರಕಾರ ಆತನ ಆರೋಗ್ಯ ಸ್ಥಿರವಾಗಿದೆ ಎಂದರೆ ರೋಗಿಯ ಲಂಗ್ಸ್ ಕ್ಯಾಪಸಿಟಿಯಲ್ಲಿ ಕಡಿಮೆ ಆಗಿದೆ ಎನ್ನುತ್ತಾರೆ. ಅರ್ಜಿದಾರರಿಗೆ ಬಿಡುಗಡೆಯಾದ ನಂತರ ಯಾವುದೇ ಆರೋಗ್ಯ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಸ್ಕ್ಯಾನ್ ಮಾಡುವಾಗ ರೇಡಿಯೋಲಾಜಿಕಲ್ ವರದಿ ಕೊಡುತ್ತಾರೆ ಎಂದರೆ ಸರಿ. ಅದರಲ್ಲಿ ಎಲ್ಲವೂ ನಾರ್ಮಲ್ ಇರುವ ಕಾರಣ ವರದಿ ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅದು ಶೇಕಡ 15 ರಷ್ಟು ನ್ಯೂನತೆ ಇರುವ ಬಗ್ಗೆ ವಿವರವಾಗಿ ಬರೆದಿಲ್ಲ ಎಂದರೆ ಸರಿ. ಅರ್ಜಿದಾರರನ್ನು ನಾನು ಪರೀಕ್ಷಿಸದೇ ಅವರಿಗೆ ನ್ಯೂನತೆ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.